R No KRNN 12

9 - 12 - 1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

- For Influential Publicity -

ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ಮೈಸೂರು

ಪ್ರಕಟಣೆ

ನಂ. ಬಿ 1 . 33 . 74 – 75 ತಾರೀಖು : 19 – 11 – 74

ಮೈಸೂರಿನ ವಿವಿಧ ಲೇ ಔಟುಗಳಲ್ಲಿ 47 ಮಾಡೆಲ್ ಮನೆಗಳು ಸಾರ್ವಜನಿಕರ ಹಂಚಿಕೆಗಾಗಿ ದೊರೆಯುತ್ತವೆ ಎಂದು ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ಈ ಮೂಲಕ ಸಂತೋಷದಿಂದ ಪ್ರಕಟಿಸುತ್ತದೆ.

ಮಾಡೆಲ್ ಹೌಸ್‌ಗಳ ವಿವರ ಕೆಳಕಂಡಂತೆ ಇವೆ :—

ಕ್ರಮ ಸಂಖ್ಯೆ	ಲೇ ಔಟು ಹೆಸರು	ಮಾದರಿ ವಿನ್ಯಾಸ	ಮನೆಗಳ ಸಂಖ್ಯೆ	ಪ್ಲಿಂತ್ ಪ್ರದೇಶ ಚದರ ಗಳಲ್ಲಿ	ನಿವೇಶನದ ಸುಮಾರು ಪ್ರದೇಶ	ಕಟ್ಟಡದ ಒಟ್ಟು ಬೆಲೆ	ಅರ್ನೆಸ್ಟ್ ಠೇವಣಿ ಹಣ ಶೇಕಡ 25
						ರೂ	ರೂ
1	ಗೋಕುಲಂ 3 ನೇ ಹಂತ	3877–15	15	9 . 94	45' x 60'	44,000 ದಿಂದ 50,800	12,700
2	ಗೋಕುಲಂ 3 ನೇ ಹಂತ	3877–2	12	10 . 00	40' x 60'	41,320 ದಿಂದ 45,610	11,400
3	ಕಾರಂಜಿಕೆರೆ ಲೇ ಔಟು	3877–2	10	10 . 00	45' x 60'	41,900 ದಿಂದ 47,800	11,950
4	ಕಾರಂಜಿಕೆರೆ 2 ನೇ ಹಂತ	ಸುಲಭ ವಿನ್ಯಾಸ	10	4 . 70	40' x 35'	14,000 ದಿಂದ 15,300	3,850

1 ಮೇಲ್ಕಂಡ ಮಾದರಿ ಮನೆಗಳಿಗಾಗಿ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ (ಮಾಡೆಲ್ ಹೌಸ್ ಹಂಚಿಕೆ) 1972 ನೇ ನಿಬಂಧನೆಗಳ ಪ್ರಕಾರ ಸಾರ್ವಜನಿಕರಿಂದ ಅರ್ಜಿಗಳನ್ನು ಕರೆಯಲಾಗಿದೆ.

2 ಅರ್ನೆಸ್ಟ್ ಠೇವಣಿ ಹಣವನ್ನು ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ಅಧ್ಯಕ್ಷರ ಹೆಸರಿನಲ್ಲಿ ಮೈಸೂರಿನ ಯಾವುದಾದರೂ ಷೆಡ್ಯೂಲ್ ಬ್ಯಾಂಕಿನಿಂದ ಪಡೆದ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಅರ್ಜಿ ಜೊತೆಯಲ್ಲಿಯೇ ಸಲ್ಲಿಸಬೇಕು.

3 ಕಟ್ಟಡಗಳ ಪ್ಲಾನ್ ಮತ್ತು ಅರ್ಜಿ ಸಲ್ಲಿಸುವಿಕೆ ಬಗ್ಗೆ ವಿವರಗಳನ್ನು ಪಡೆಯಲು ಮಂಡಳಿಯ ಕಾರ್ಯಾಲಯದ ಕೆಲಸದ ದಿನಗಳಲ್ಲಿ ಬೆಳಗ್ಗೆ 11 ಗಂಟೆಯಿಂದ ಸಂಜೆ 4–30 ಗಂಟೆಯ ವರೆವಿಗೆ ಸಾರ್ವಜನಿಕರು ಈ ಕಛೇರಿಗೆ ಭೇಟಿ ನೀಡ ಬಹುದು. ಅರ್ಜಿ ಫಾರಂಗಳನ್ನು ಎರಡು ರೂಪಾಯಿ ಕೊಟ್ಟು ಪಡೆಯಬೇಕು. ಡಿಸೆಂಬರ್ 26 ರಂದು ಸಂಜೆ 4 ಗಂಟೆಯ ವರೆವಿಗೆ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುವುದು

4 ಮನೆಗಳ ವಿತರಣೆ ಫಲಿತಾಂಶದ ಬಗ್ಗೆ ಅರ್ಜಿಗಳ ಸಂಖ್ಯೆಗಳನ್ನು ಮಾತ್ರ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸುವುದರಿಂದ ಅರ್ಜಿದಾರರು ತಮ್ಮ ಅರ್ಜಿಗಳ ಸಂಖ್ಯೆಗಳನ್ನು ಗುರುತು ಹಾಕಿಕೊಳ್ಳಬೇಕೆಂದು ಸಾರ್ವಜನಿಕರನ್ನು ಕೋರಲಾಗಿದೆ.

5 ಮನೆಗಳ ಪೂರ್ಣ ಬೆಲೆಯನ್ನು ಅರ್ನೆಸ್ಟ್ ಠೇವಣಿ ಮೂಲಕ ಸಲ್ಲಿಸುವವರಿಗೆ ಮನೆ ಹಂಚಿಕೆಯಲ್ಲಿ ಆದ್ಯತೆ ಕೊಡಲಾಗುವುದು.

6 ಮನೆ ಬಿಕ್ಕದ ಅರ್ಜಿದಾರರಿಗೆ ಅವರ ಅರ್ನೆಸ್ಟ್ ಠೇವಣಿ ಹಣವನ್ನು ವಾಪಸ್ಸು ಕೊಡಲಾಗುವುದು. ಮನೆ ಹಂಚಿಕೆಯ ಎರಡು ತಿಂಗಳ ಒಳಗೆ ಠೇವಣಿ ರಶೀತಿಗಳನ್ನು ಲಗತ್ತಿಸಿದ ಅರ್ಜಿಗಳನ್ನು ಕೊಡಬೇಕು.

7 ಹಂಚಿಕೆಯ ಬಗ್ಗೆ ಮಂಡಳಿಯ ತೀರ್ಮಾನವೇ ಅಂತಿಮವಾಗಿದ್ದು ಮಂಡಳಿಯ ನಿರ್ಧಾರವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.

ಸಹಿ/– ಬಿ. ಎನ್. ಕೆಂಗೇಗೌಡ,
ಅಧ್ಯಕ್ಷರು, ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ಮೈಸೂರು.

ad–venture

ಜುನಾವಣಾ ಸುಧಾರಣೆ

ಬೆಂಗಳೂರು– ವಿಶ್ವವಿದ್ಯಾಲಯದಲ್ಲಿನ ಕಾನ್ವೊಕೇಷನ್ ಭಾಷಣಮಾಡುತ್ತಾ ಡಾ| ಕುವೆಂಪುರವರು, ಜುನಾವಣಾ ಸುಧಾರಣೆಗೆ ಕ್ರಾಂತಿಯಾದರೂ ಸರಿ ಅದನ್ನು ಸಾಧಿಸಲು ಕರೆಕೊಟ್ಟರು : ಜುನಾವಣೆಯಲ್ಲಿ ಸಾತ್ವಿಕ ಪ್ರವೃತ್ತಿ ದೊರೆಯಲು ವಿಫಲವಾದರೆ, ಕಾಳಸಂತೆಕೋರರು, ಕಳ್ಳಸಾಗಾಣಿಕೆಗಾರರು, ಕಾಳಸಂತೆಕೋರರು, ಗೂಂಡಾಗಳೂ ಮತ್ತು ನೀತಿನಡತೆ ಇಲ್ಲದ ಜನರೂ ಆಡಳಿತಗಾರರಾಗುವರೆಂದು ಹೇಳಿದರು

●

ಕರ್ನಾಟಕ ಲಾಟರಿ

ಉಡುಪಿಯಲ್ಲಿ ತೆಗೆದ ಕರ್ನಾಟಕ 66 ನೇ ಲಾಟರಿಯಲ್ಲಿ ಪ್ರಥಮ ಬಹುಮಾನಗಳು ತಲಾ ರೂ. 1 ಲಕ್ಷ ಮುಂಡ್ಕ ಮತ್ತು ಅಹಮದಾಬಾದಿನಲ್ಲಿ ಮಾರಲಾದ ಟಿಕೀಟುಗಳಿಗೆ ಸಿಕ್ಕಿತು

★

ಯಾರನ್ನೂ ತೆಗೆಯುವ ಇಚ್ಛೆಯಿಲ್ಲ

ಬಾಲಿಯಾ— ಪ್ರಧಾನಿ ಇಂದಿರಾರನ್ನು ತೆಗೆದುಹಾಕುವದಕ್ಕಾಗಿ ಈ ಚಳವಳಿ ಎಂದು ಅವರು ಅಪಾದಿಸಿರುವದಾಗಿ ವರದಿಯ ಬಗ್ಗೆ ಜಯಪ್ರಕಾಶನಾರಾಯಣರು ಆ ಅಪಾದನೆಯನ್ನು ಇಲ್ಲಿ ಪ್ರಚಂಡ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ, ನಿರಾಕರಿಸಿದರು – ನಾನು ಯಾರನ್ನೂ ತೆಗೆದುಹಾಕುವ ಇಚ್ಛೆ ಹೊಂದಿಲ್ಲವೆಂದೂ, ಆದರೆ ನಾವು ಯಾವುದನ್ನು ತೆಗೆದುಹಾಕಬೇಕೆಂದಿರುವೆವೋ ಅದರ ರಕ್ಷಣೆಗೆ ಅವರು ನಿಂತಿದ್ದಾರೆಂದು ಹೇಳಿದರು – ಜಯಪ್ರಕಾಶರು ಪೋಲೀಸು ಲೈನಿನಲ್ಲಿ ಭಾಷಣಮಾಡುವುದಕ್ಕೆ ಮುಖ್ಯಮಂತ್ರಿ ಶ್ರೀ ಬಹುಗುಣರು ಅನುಮತಿ ತಿರಸ್ಕರಿಸಿದರು.

★

ಸಾಟ್ನಾ ಬಂದ್

ಸಾಟ್ನಾ— ಕಾಂಗ್ರೆಸ್ ಎಂ ಎಲ್ ಎ ಜಮೀಲ್ ಅಹಮದ್‌ರನ್ನು ಸಭೆಗೆ ರಾಜೀನಾಮೆ ಕೊಡಲು ಒತ್ತಾಯ ಮಾಡಲು ಅವರನ್ನು ಸ್ವಯಂಸೇವಕರು ಘೇರಾವೋ ಮಾಡಿದಾಗ ಅವರ ಸಹರೆಯವನು ಕುಸಾಕೆ ಹಾರಿಸಿದನು – ಒಬ್ಬ ವಿದ್ಯಾರ್ಥಿಯು ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟನು – ಇದನ್ನು ಖಂಡಿಸಿ ವಿದ್ಯಾರ್ಥಿಗಳು ನಿನ್ನೆ ಮೆರವಣಿಗೆ ನಡೆಸಿ, ಇಂದು ಬಂದ್‌ಗೆ ಕರೆಕೊಟ್ಟರು.

ವಿಗ್ರಹಗಳ ಪ್ರತಿಷ್ಠಾಪನೆ

ಶಿವಮೊಗ್ಗಾ — ಶ್ರೀ ಶೃಂಗೇರಿ ಜಗದ್ಗುರುಗಳವರು ಇಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಶ್ರೀ ಶಂಕರ ಮಠದಲ್ಲಿ ಮಹಾಗಣಪತಿ, ಶಾರದಾ ಮತ್ತು ಶಂಕರ ಭಗವತ್ಪಾದಾಚಾರ್ಯರವರ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿದರು – ಬಹು ಜನ ಭಕ್ತರು ಆಗಮಿಸಿದ್ದರು.

ಕಾರ್ತೀಕ ಸೋಮವಾರಕ್ಕಾಗಿ ವಿಶೇಷ ಕಾರ್ಯಕ್ರಮ

ಮೈಸೂರು— ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಕಾರ್ತೀಕ ಸೋಮವಾರ ಪ್ರಯುಕ್ತ ಈ ಸಂಜೆ ವಿಶೇಷ ಕಾರ್ಯಕ್ರಮಗಳ ಏರ್ಪಾಡಿದೆ.

ಪಾರ್ಲಿಮೆಂಟಿಗೆ ರಾಜೀನಾಮೆ

ಗಂಗಾನಗರ— ಜನಸಂಘದ ನಾಯಕ ಶ್ರೀ ವಾಜಪೇಯಿಯವರು ತಾವು ಪಾರ್ಲಿಮೆಂಟಿಗೆ ರಾಜೀನಾಮೆ ಕೊಡಲು ನಿರ್ಧರಿಸಿರುವದಾಗಿ ಪತ್ರಿಕೆಯವರಿಗೆ ತಿಳಿಸಿದರು ; ಪಾರ್ಟಿ ಅನುಮತಿ ದೊರೆತೊಡನೆ ಸ್ಪೀಕರ್‌ರಿಗೆ ರಾಜೀನಾಮೆ ಪತ್ರ ಕಳುಹಿಸುವುದಾಗಿ ತಿಳಿಸಿದರು – ಜನತಾ ಸೇವೆಗೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಪರಿಣಾಮಕಾರಿ ಸಂಸ್ಥೆಯಾಗಿಲ್ಲವೆಂದೂ, ಅದು ಅಧಿಕಾರ ಮತ್ತು ದೊಡ್ಡಸ್ತಿಕೆ ಪಡೆಯಲು ಅನುಕೂಲವಾಗಿದೆ ಎಂದು ಹೇಳಿದರು – ಪಾರ್ಲಿಮೆಂಟು ಕೇವಲ ಬಹುಸಂಖ್ಯಾ ಪಾರ್ಟಿಯ ಅನುಕೂಲಕ್ಕೆದ್ದು ಕೇವಲ ರಬ್ಬರ್ ಸ್ಟ್ಯಾಂಪು ಮಟ್ಟಕ್ಕೆ ಇಳಿದಿದೆಯೆಂದೂ ಅಲ್ಲಿ ಕೂಗಾಟ ಪ್ರತಿಕೂಗಾಟ, ಅವ್ಯವಸ್ಥೆ ದೃಶ್ಯಗಳಿಂದ ಕೂಡಿದೆ ಎಂದು ಹೇಳಿದರು

★ ನವದೆಹಲಿ— ತಾ|| 13 ಸೂರ್ಯ ಗ್ರಹಣ ; ಆದರೆ ಭಾರತದಲ್ಲಿ ಕಾಣಲ್ಲ.

ದಿ ವ್ಯವಾಣಿ

ವ್ಯಕ್ತಿಯ ಪಾವಿತ್ರ್ಯಾಣಿಕತೆ ಸಾರ್ವಜನಿಕ ಕಲ್ಯಾಣವು.

ವುಡ್‌ಲಾಂಡ್ಸ್ 6 12 74 ರಿಂದ

ಅಮೋಘ 5 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ 3 ಪ್ರದರ್ಶನಗಳು

ಅ ಪೆ ರಾ 29 11 74 ರಿಂದ

ಪಾತಾಳ ಭೈರವಿ

ಎನ್ ಟಿ ರಾಮುರಾವ್ ರೇಲಂಗಿ ಗಿರಿಜ ಇವರ ಅಭಿನಯದಿಂದ ಕೂಡಿದ

ಅಮೋಘ ತೆಲುಗು ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

SHAKTI
SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Help The Gorakshana

— Humanitarian Propoganda Monthly....

Contribute Liberally

to the National Defence Fu

Edited Printed and Published by Dharmapracharanirata M S. Krishna Rao (Proprietor) at the Satvavadi Press, Chamarajapuram Mysore